# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. **749 / 2021**

ಸಿಡಬ್ಲ್ಯೂ- **9**
ಪಿಡಬ್ಲ್ಯೂ-**2**

ದಿನಾಂಕಃ **19.07.2025.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರುಃ | - | ಶಿವರಾಜ ರೆಡ್ಡಿ |
| ತಂದೆಯಃ | - | ಮಲ್ಲಣ್ಣಗೌಡ |
| ವಯಸ್ಸುಃ | -? | 44 ವರ್ಷ |
| ಉದ್ಯೋಗಃ | - | ಪೊಲೀಸ್ ಪೇದೆ ಯಾದಗಿರಿ ಪೋ.ವರಿಷ್ಟಾಧಿಕಾರಿಗಳ ಕಚೇರಿ. |
| ವಾಸಸ್ಥಳಃ | - | ಯಾದಗಿರಿ |

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

2017 ರಿಂದ 2023 ವರೇಗೆ ಯಾದಗಿರಿ ಮಹಿಳಾ ಠಾಣೆಯಲ್ಲಿ ಮುಖ್ಯ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 10.06.2021 ರಂದು ಸಂಜೆ 4-30 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ದೂರನ್ನು ಸಲ್ಲಿಸಿದ್ದರು. ಅದನ್ನು ಸ್ವೀಕರಿಸಿಕೊಂಡು ಠಾಣೆಯ ಗುನ್ನಾ ಸಂಖ್ಯೆ: 38/2021 ನೇದ್ದನ್ನುದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿದ್ದೆ. ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ದಿನಾಂಕಃ 11.06.2021 ರಂದು ಗುನ್ನಾ ನಡೆದ ಸ್ಥಳಕ್ಕೆ ಚಾಸಾ-2 ಮತ್ತು 3 ರವರು ಕರೆದುಕೊಂಡು ಹೋಗಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿರುತ್ತೇನೆ. ಅದೇ ರೀತಿ ಗುನ್ನಾ ಸ್ಥಳದಲ್ಲಿ ಇದ್ದ ಕಟ್ಟಿಗೆಯ ಬಡಿಗೆಯನ್ನು ಜಪ್ತಿಪಡಿಸಿಕೊಂಡಿದ್ದೆ. ಅದಕ್ಕೆ ಪಂಚರ ಸಹಿವುಳ್ಳ ಅದಕ್ಕೆ ಅಂಟಿಸಿದ್ದೆ.

ಈ ಹಂತದಲ್ಲಿ ಸ.ಸ.ಅ ರವರ ಕೋರಿಕೆಯಬ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದುಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,

ಯಾದಗಿರಿ.